**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 22.09.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು ：**

**ಮುಂದುವರೆದ ಪಾಟೀ ಸವಾಲು 1 ಮತ್ತು 2 ನೇ ಆರೋಪಿಗಳ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ**

ನಾನು ವಿ.ವಿ.ಮೊಹಲ್ಲಾದಲ್ಲಿ ಹುಟ್ಟಿ ಬೆಳೆದಿದ್ದೇನೆ. ನನ್ನ ಮನೆಯಿಂದ ಒಂಟಿಕೊಪ್ಪಲು ವೆಂಕಟರಮಣ ದೇವಸ್ಥಾನಕ್ಕೆ ಸುಮಾರು 1 ಕಿ.ಮೀ ಅಂತರ ಇದೆ. ಚಿಕ್ಕಂದಿನಿಂದಲೂ ನಾನು ಒಂಟಿಕೊಪ್ಪಲಿನಲ್ಲಿ ಓಡಾಡಿ ರೂಡಿ ಇದೆ. ದೇವಸ್ಥಾನಕ್ಕೆ ಹತ್ತಿರದಲ್ಲಿ ವಿ.ವಿ.ಪುರಂ ಪೊಲೀಸ್ ಠಾಣೆ ಇದೆ ಎಂದರೆ ಸರಿ. ರಾಮಕೃಷ್ಣ ಆಶ್ರಮ ಹತ್ತಿರ ಹಸು ಮೇಯಿಸಿ ರೂಡಿ ಇದೆ. ನಾನು ಅಂದು 5 ಹಸುಗಳನ್ನು ಮೇಯಿಸಲು ಬಿಟ್ಟು ಬಂದು ನಂತರ ನೋಡಲು ಸೈಕಲ್ ನಲ್ಲಿ ಹೋಗಿದ್ದೆ. ಏಟಾದ ವ್ಯಕ್ತಿಯನ್ನು ನಾನು ವ್ಯಾನಿಗೆ ಹಾಕುವ ಪ್ರಯತ್ನ ಮಾಡಿಲ್ಲ. ಒಬ್ಬ ವ್ಯಕ್ತಿ ಚಿಕ್ಕಪ್ಪ-ಚಿಕ್ಕಪ್ಪ ಎಂದು ಕೂಗಿದ್ದು ಹಲ್ಲೆಗೆ ಒಳಗಾದ ವ್ಯಕ್ತಿಯನ್ನು ವ್ಯಾನಿನಲ್ಲಿ ಹಾಕಿಕೊಂಡು ಹೋದ ನಂತರ ನಾನು ಸ್ಥಳದಿಂದ ಹೊರಟು ಹೋಗಿದ್ದೇನೆ. ವ್ಯಾನಿನಲ್ಲಿ ಎಷ್ಟು ಜನರು ಮತ್ತು ಯಾರು ಇದ್ದರು ಎಂದು ಗೊತ್ತಿಲ್ಲ ಒಬ್ಬ ಹುಡುಗ ಇದ್ದು ಚಿಕ್ಕಪ್ಪ ಎಂದು ಕೂಗಿದ್ದರು.

2. ಘಟನೆ ಮರುದಿನ ಪೊಲೀಸರು ನನಗೆ ಠಾಣೆಗೆ ಕರೆಸಿ ಹೇಳಿಕೆ ಪಡೆದಿದ್ದಾರೆ. ನನ್ನ ಹೇಳಿಕೆಯನ್ನು ಬರೆದುಕೊಂಡಿದ್ದಾರೆ. ನಾನು ಸಹಿ ಮಾಡಿದ್ದೇನೆ. ಘಟನೆ ದಿನ ನಾನು ಸೈಕಲ್ ನಲ್ಲಿ ಮನೆಗೆ ವಾಪಸ್ಸು ಹೋಗಿದ್ದೇನೆ. ಪೋಲೀಸರಿಗೆ ಹೇಳಿಕೆ ನೀಡುವ ತನಕ ಘಟನೆ ಬಗ್ಗೆ ಯಾರಿಗೂ ಮಾಹಿತಿ ಕೊಟ್ಟಿಲ್ಲ. ನಾನು ಜನ್ಮ ದಿನಾಂಕ 09.05.1991. ನಾನು ಹತ್ತನೇ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಸ್ವತಂತ್ರವಾಗಿ ಮನೆಯ ಹೊರಗಡೆ ಓಡಾಡಬಲ್ಲೆ. ನಾನು ಘಟನೆ ಬಗ್ಗೆ ತಾಯಿಗೆ ಮಾಹಿತಿ ಕೊಟ್ಟಿಲ್ಲ. ನಾನು ಸ್ಥಳದಲ್ಲಿ

ಇರಲಿಲ್ಲ ಮತ್ತು ಘಟನೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯ ಮೇಲೆ ಮಚ್ಚಿನ ಏಟು ಆಗಿರಲಿಲ್ಲ ಎಂದರೆ ಸರಿಯಲ್ಲ.

3. ನಾನು ಹಾಲು ವ್ಯಾಪಾರ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾನು ಅವ್ವ ಮಾದೇಶ ಮತ್ತು ಅವರ ಪತ್ನಿ ಶ್ರೀಮತಿ ಭಾಗ್ಯಮ್ಮ ಅವರ ಜೊತೆ ಓಡಾಡಿಕೊಂಡು ಅವರು ಹೇಳಿದ ಕೆಲಸಗಳನ್ನು ಮಾಡಿಕೊಂಡು ಇದ್ದೇನೆ ಎಂದರೆ ಸರಿಯಲ್ಲ. ಹೇಳಲಾದ ಘಟನೆ ಆದ 2-3 ತಿಂಗಳ ನಂತರ ದೋ.ಪಟ್ಟಿ ಸಲ್ಲಿಸುವ ಮೊದಲು ಅವ್ವ ಮಾದೇಶ ಮತ್ತು ಅವರ ಗುಂಪಿನ ಒತ್ತಡದ ಮೇರೆಗೆ ಹಳೆಯ ದಿನಾಂಕಕ್ಕೆ ನನ್ನ ಹೇಳಿಕೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. "ದಿನಾಂಕ 23.12.2016 ರಂದು ಬೆಳಿಗ್ಗೆ 10.25 ಗಂಟೆಗೆ ಟೆಂಪಲ್ ರಸ್ತೆಯಿಂದ 6 ನೇ ಮುಖ್ಯ ರಸ್ತೆ ಕಡೆಗೆ ಹೋಗುತ್ತಿದ್ದೆ. ಪೋಸ್ಟ್ ಆಫೀಸ್ ಪಕ್ಕ ಸ್ಯಾಂಟ್ರೋ ಕಾರಿನ ಪಕ್ಕ 1 ರಿಂದ 5 ನೇ ಆರೋಪಿಗಳು ನಿಂತಿದ್ದರು" ಎಂದು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. "ಹಲ್ಲೆ ಮಾಡಿದ ರಭಸಕ್ಕೆ ಸಂಜು ಅವರ ಕೈಯಲ್ಲಿ ಇದ್ದ ಮಚ್ಚು ಕೆಳಗೆ ಬಿದ್ದಿತ್ತು" ಎಂದು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. "ನಾನು ಹಲ್ಲೆಗೆ ಒಳಪಟ್ಟ ವ್ಯಕ್ತಿಯ ಹತ್ತಿರ ಹೋಗಿ ನೋಡಿದಾಗ ಒಬ್ಬ ಹುಡುಗ ಚಿಕ್ಕಪ್ಪ ಚಿಕ್ಕಪ್ಪ ಎಂದು ಕೂಗಿದ್ದು ಹಲ್ಲೆಗೆ ಒಳಗಾದ ವ್ಯಕ್ತಿ ಉಸಿರಾಡುತ್ತಿದ್ದು ಸದರಿ ವ್ಯಕ್ತಿಯನ್ನು ಸದರಿ ಹುಡುಗ ವ್ಯಾನಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ" ಎಂದು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. ನನಗೆ ಈಗ ಸೂಚಿಸಿದಂತೆ ನಾನು ಎಂದು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ದಿನಾಂಕ 25.12.2016 ರಂದು ನಾನು ವಿವಿ ಪುರಂ ಪೋಲಿಸ ಠಾಣೆಗೆ ಹೋಗಿ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನಾನು ನೋಡಿರುವುದಾಗಿ ಮತ್ತು ಗುರುತಿಸುವುದಾಗಿ ಪೊ.ಅಧಿಕಾರಿ ಸಮಕ್ಷಮ ಹೇಳಿದ ಮೇರೆಗೆ ಪೊ.ಅಧಿಕಾರಿ ನನ್ನ ಹೇಳಿಕೆಯ ಬಗ್ಗೆ ಖಾತ್ರಿ ಪಡಿಸಿಕೊಂಡು ರೂಂ ನಲ್ಲಿ ಇದ್ದ 5 ಜನ ವ್ಯಕ್ತಿಗಳನ್ನು ತೋರಿಸಿದ್ದು ನಾನು ಗುರುತಿಸಿದ್ದೇನೆ ಎಂದು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. ನನಗೆ ಈಗ ಸೂಚಿಸಿದಂತೆ ನಾನು ಎಂದು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

5. ನನ್ನ ತಾಯಿ ಮೂಲತಃ ಒಂಟಿಕೊಪ್ಪಲಿಗೆ ಸೇರಿದವರು. ನನ್ನ ತಾಯಿಯ ತಮ್ಮನ ಹೆಸರು ಮಹೇಶ. ನನಗೆ ಚಂದು ಎಂಬ ಹೆಸರಿನ ಸೋದರ ಮಾವ ಇದ್ದಾರೆ ಎಂದರೆ ಸರಿಯಲ್ಲ. ನಾನು, ಚಂದು, ಕುಮಾರ ಮತ್ತು ಮನೋಹರ ಅವ್ವ ಮಾದೇಶನ ಗುಂಪಿನವರು ಎಂದರೆ ಸರಿಯಲ್ಲ. ನನಗೆ ತೋರಿಸಲಾದ 2 ಫೋಟೋಗಳಲ್ಲಿ ನಾನು ಇದ್ದೇನೆ ಎಂದರೆ ಸರಿಯಲ್ಲ.(**ಸಾಕ್ಷಿದಾರರಿಗೆ ತೋರಿಸಿದ 2 ಫೋಟೋಗಳ ಬಗ್ಗೆ ಸಾಕ್ಷಿದಾರರು ಒಪ್ಪಿಕೊಂಡಿಲ್ಲ ಆದರೆ ಪ್ರಕರಣ ಸಲುವಾಗಿ ಮತ್ತು ಗುರುತಿನ ಸಲುವಾಗಿ ಮಾತ್ರ ಕ್ರಮ ಸಂಖ್ಯೆ 4 ಮತ್ತು 5 ಎಂದು ಸಂಖ್ಯೆಗಳನ್ನು ನೀಡಲಾಗಿದೆ.**) ಪೋಟೋಗಳಲ್ಲಿ ನಾನು ಇದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಟೋಗಳಲ್ಲಿ ಕಂಡು ಬಂದರು ಸಹ ಅವ್ವ ಮಾದೇಶ ಅವರ ಗುಂಪಿನವರು ಅದ ಕಾರಣ ಅವರ ಮಾತು ಕೇಳಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ನಾನು ಗಿಳಿಪಾಠದಂತೆ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**6.** ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿಗಳ ತಂದೆಯ ಹೆಸರು ಮತ್ತು ವಿಳಾಸ ಹೇಳಲು ಬರುವುದಿಲ್ಲ. ನಾನು ಆರೋಪಿಗಳನ್ನು ಈ ಮೊದಲು ನೋಡಿಲ್ಲ ಎಂದರೆ ಸರಿಯಲ್ಲ. ಹೇಳಿಕೆ ಮೇರೆಗೆ ಆರೋಪಿಗಳನ್ನು ನ್ಯಾಯಾಲಯದಲ್ಲಿ ಗುರುತಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***